ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 97 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್. ವಿ ಸಂಕನೂರ |
| ಉತ್ತರಿಸುವ ದಿನಾಂಕ | 13/02/2023 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ಕಲಬುರಗಿ ವಿಜ್ಞಾನಗಳ ಸಂಸ್ಥೆಯ ವಿರುದ್ಧ ಕಳೆದ 3 ವರ್ಷಗಳಲ್ಲಿ ಯಾವುದಾದರೂ ದೂರುಗಳು ಹಾಗೂ ಪ್ರಕರಣಗಳು ದಾಖಲಾಗಿದೆಯೇ: (ಹಾಗಿದ್ದಲ್ಲಿ ದಾಖಲಾದ ದೂರು ಹಾಗೂ ಪ್ರಕರಣಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು) | ಗುಲ್ಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಿಬ್ಬಂದಿಗಳಿಗೆ ವೇತನವನ್ನು ತಡವಾಗಿ ಪಾವತಿ ಮಾಡುತ್ತಿರುವ ಬಗ್ಗೆ ದೂರು ಸ್ವೀಕೃತವಾಗಿರುತ್ತದೆ. ಈ ಬಗ್ಗೆ ಸಂಸ್ಥೆಯ ನಿರ್ದೇಶಕರಿಗೆ ದಿನಾಂಕ 02/09/2022 ರಂದು ಕಾರಣ ಕೇಳುವ ನೋಟೀಸ್‌ನ್ನು ಹೊರಡಿಸಲಾಗಿದ್ದು, ನಿರ್ದೇಶಕರು ನೀಡಿರುವ ವಿವರಣೆಯಲ್ಲಿ ಮುಂಬರುವ ತಿಂಗಳುಗಳ ವೇತನ ಬಿಲ್ಲುಗಳನ್ನು HRMS ನಲ್ಲಿ ಒಟ್ಟಾರೆಯಾಗಿ ಪ್ರತಿ ಮಾಹೆಯ ಮೊದಲನೇ ವಾರದಲ್ಲಿ ಸಲ್ಲಿಸಲಾಗುವುದೆಂದು ತಿಳಿಸಿರುವುದನ್ನು ಸರ್ಕಾರವು ಪರಿಗಣಿಸಿ ಪ್ರಸ್ತಾಪಿತ ವಿಷಯವನ್ನು ಮುಕ್ತಾಯಗೊಳಿಸಿದೆ. |
| ಆ) | ಜಿಲ್ಲಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರಾಗಲು ಇರುವ ನಿಯಮ ಹಾಗೂ ಮಾನದಂಡಗಳೇನು; | ಸಂಸ್ಥೆಯ ಬೈಲಾದಲ್ಲಿ ನಿಗಧಿಪಡಿಸಿರುವ ಮಾನದಂಡಗಳಂತೆ ಅನುಸರಿಸಿ ಸಂಸ್ಥೆಯ ನಿರ್ದೇಶಕರನ್ನು ನೇಮಕ ಮಾಡಲಾಗುತ್ತದೆ.<br><br>ಸಂಸ್ಥೆಯ ಬೈಲಾದ ಅನ್ವಯಿಕ ಪ್ರತಿಯನ್ನು ಅನುಬಂಧದಲ್ಲಿರಿಸಿದೆ. |
| ಇ) | ಕಳೆದ 3 ವರ್ಷಗಳಲ್ಲಿ ಜಿಮ್ಸ್ ವತಿಯಿಂದ ಜಿಮ್ಸ್ ವ್ಯಾಪ್ತಿಯಲ್ಲಿ ನಡೆದ ಕಾಮಗಾರಿಗಳು ಯಾವುವು? (ಕಾಮಗಾರಿಗಳ ಮೊತ್ತ ಮತ್ತು ಟೆಂಡರ್ ಪ್ರಕ್ರಿಯೆ ನಡೆದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಗುಲ್ಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಕಳೆದ 3 ವರ್ಷಗಳಿಂದ ಈ ಕೆಳಕಂಡ ಕಾಮಗಾರಿಗಳು ಪ್ರಗತಿಯಲ್ಲಿವೆ.<br>1) ಸರ್ಕಾರದ ಆದೇಶ ಸಂಖ್ಯೆ ಆಕುಕ 150 ಎಂಎಸ್‌ಎಫ್ 2014, ದಿನಾಂಕ 12/09/2017 ರಲ್ಲಿ ಗುಲ್ಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ರೂ. 107.06 ಕೋಟಿಗಳ ಅಂದಾಜು ವೆಚ್ಚದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದ್ದು, ಸರ್ಕಾರದ ಆದೇಶ ಸಂಖ್ಯೆ: ಆಕುಕ 430 ಎಂಪಿಎಸ್ 2017, ದಿನಾಂಕ 27/03/2018 ರಲ್ಲಿ ಸದರಿ ಆಸ್ಪತ್ರೆಯನ್ನು ನಿರ್ಮಾಣ ಮಾಡಲು ಎಲ್1 ಗುತ್ತಿಗೆದಾರರಾದ ಮೆ\|\|ಜಂಪಣ ಕನ್ಸ್ಟ್ರಕ್ಷನ್ಸ್ ಪ್ರೈ.ಲಿ., ಬೆಂಗಳೂರು ನಮೂದಿಸಿರುವ ರೂ.12414.64 ಲಕ್ಷಗಳ ಟೆಂಡರ್ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ. ಸದರಿ ಕಾಮಗಾರಿಗೆ ನಿಗಧಿಪಡಿಸಿದ್ದ ಅನುದಾನವನ್ನು ಬಿಡುಗಡೆಗೊಳಿಸಲಾಗಿದ್ದು, ಕಾಮಗಾರಿಯು ಪ್ರಗತಿಯ ಹಂತದಲ್ಲಿದೆ.<br><br>2) ಸರ್ಕಾರದ ಆದೇಶ ಸಂಖ್ಯೆ ಆಕುಕ 221 ಎಂಪಿಎಸ್ 2018 ದಿನಾಂಕ 24/05/2018 ರಲ್ಲಿ ಸಿಎಸ್‌ಎಸ್‌ಡಿ ಸ್ಥಾಪನೆಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ವಿಭಾಗವು ಸಲ್ಲಿಸಿರುವ ರೂ.400.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ಆದೇಶಿಸಲಾಗಿರುತ್ತದೆ. ಪ್ರಸ್ತುತ ಕಾಮಗಾರಿ ಪೂರ್ಣಗೊಂಡಿದೆ. |

ಸಂಖ್ಯೆ: ಎಂಇಡಿ 120 ಎಂಎಂಸಿ 2023

(ಡಾ.ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು



Generated from eOffice by DR.K SUDHAKAR, MED-MIN(SK), MINISTER, MEDICAL EDUCATION SEC on 09/02/2023 07:12 PM